ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೊ.

ತಾರೀಖು 1ನೆ ಸೆಪ್ಟಂಬರು 1904ನೆ ಇಸವಿ.

* ಮಾರ್ಜಿನ್ನಲ್ಲಿ ನಮೂದುಮಾಡಿ ಇರತಕ್ಕ ಇನಾಂ ಗ್ರಾಸುಗಳು, ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗಿಗೋಸ್ಕರವಾಗಿ

* 1. ಖಾಯಂಗುತ್ತಾ ಲಿಂಗಾಪುರ—ವೇಮಗಲ್ ಹೋಬಳಿ	.. }	ತಾಲ್ಲೂಕ್ ಅಮಲ್ದಾರ್ ಕಛೇರಿಯಲ್ಲಿ
2. ಜೋಡಿ ಸೋಮಾಶಾಸ್ತ್ರಿ ಹೂಸೂರು—ಹೊಳೂರು ಹೋಬಳಿ	... }	ಕೋಲಾರ ತಾಲ್ಲೂಕು.
3. ಜೋಡಿ ಸುಬ್ಬಣ್ಣಂಟಿ—ತ್ಯಾಕಲ್ ಹೋಬಳಿ	..	ಮಾಲೂರು ತಾಲ್ಲೂಕು.

1904ನೆ ಇಸವಿ ಅಕ್ಟೋಬರು ಮಾಹೆ 31ನೆ ತಾರೀಖಿನ ಒಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರತಿಬಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಒಕ್ಕೆ 1904ನೆ ಮುಕ್ತಂ 36ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 522, 521, 520ನೆ ನಂಬರ್ ಪೇಜ ನೋಡತಕ್ಕದ್ದು.)

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ಸ 1904—1905ನೆ ಇಸವಿ ಮಿ|| ಅರ್ಜೀ ನಂಬರ್ 18.

ಶಿವಮೊಗ್ಗೆಯಲ್ಲಿ ವಾಸವಾಗಿದ್ದ ಮೃತಪಟ್ಟ ಶ್ರೀನಿವಾಸಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಗಾಜನೂರು ಕೃಷ್ಣಾಚಾರ್ರು, ಗಾಜನೂರು ಭೀಮಾಚಾರ್ರು, ಮೃತಪಟ್ಟ ಸದರೀ ಶ್ರೀನಿವಾಸಾಚಾರ್ರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಕೃಷ್ಣಾಚಾರ್ರು, ಭೀಮಾಚಾರ್ರು, ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸಾಚಾರ್ರ ಜೆಂದಗಿ ಬಗ್ಯಾಗಿ ಬರತಕ್ಕ (146—12—0) ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ಸ 1901ನೆ ಇಸವಿ VIIನೆ ನಂಬರ್ ರಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಾಚಾರ್ರ, ಭೀಮಾಚಾರ್ರ ಅರ್ಜಿಯನ್ನು ಸ್ ಸ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಸ 1904ನೆ ಇಸವಿ ಸಪ್ಟಂಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ವೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ವೆಂಕಟವರದ ಅಯ್ಯಂಗಾರ್.
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ಸ 1904—1905ನೆ ಇಸವಿ ಅರ್ಜೀ ನಂಬರ್ 44.

ಮೃತಪಟ್ಟ ವೆಂಕಟಸುಬ್ಬಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕೃಷ್ಣರಾಜಪ್ಯಾಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿ ಕುಪ್ಪಹಳ್ಳಿಯಲ್ಲಿರುವ ವೆಂಕಟಸುಬ್ಬಯ್ಯನವರ ಹೆಂಡತಿ ತಿವ್ಯಕ್ಕಾ ಮೈನರ್, ಗಾರ್ಡಿಯರ್ ತಂದೆ ನಾಗಪ್ಪಯ್ಯಾ, ಮೃತಪಟ್ಟ ಸದರೀ ವೆಂಕಟಸುಬ್ಬಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕುಪ್ಪಹಳ್ಳಿ ವಾಸಸ್ಥರಾಗಿ ಮೃತಪಟ್ಟ ವೆಂಕಟಸುಬ್ಬಯ್ಯನವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ಸ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಸುಬ್ಬಯ್ಯನವರ ಅರ್ಜಿಯನ್ನು ಸ್ ಸ 1904ನೆ ಇಸವಿ ನವಂಬರ್ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೇಲ್ಕ್ಯಂಡವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಸ 1904ನೆ ಇಸವಿ ಸೆಪ್ಟಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ವೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.